

ಸಿದ್ಧಲಿಂಗಯ್ಯ

ಮನುಷ್ಯರಾಗಿ ಬಾಳಬೇಕು. ಶ್ರೀ ಬಸವಲಿಂಗಪ್ಪ ಅವರು ಸಿಂಹ. ನಾವು ಮರಿಸಿಂಹಗಳಾಗಿ ಅವರ ಹಿಂದೆ ಹೋಗುತ್ತೇವೆ' ಎಂದು ಹೇಳಿದರು.

ಬಿಬಿಯವರು ಮಂತ್ರಿಯಾಗಿ ಉಳಿದಿದ್ದರೆ ಆಗುವುದಕ್ಕಿಂತ ಹೆಚ್ಚಿನ ಪರಿಣಾಮ, ಅಧಿಕಾರ ಕಳೆದುಕೊಂಡ ಬಳಿಕ ಆಯಿತು. ಅವರು ತಮ್ಮ ರಾಜೀನಾಮೆಯ ಪರಿಣಾಮವನ್ನು ಹೀಗೆ ವಿವರಿಸಿದರು: 'ದೇಶದಾದ್ಯಂತ ಅದರಲ್ಲೂ ಯುವಕರಲ್ಲಿ, ಒಂದು ಕ್ರಾಂತಿಯ ಮನೋಭಾವನೆ, ಸಿಟ್ಟಿನ ಮನೋಭಾವನೆ ಎದ್ದು ಕಾಣುತ್ತಿದೆ. ನಾನು ಎಲ್ಲಿಗೆ ಹೋದರೂ ಕೂಡ ಯುವಕ ವೃಂದ ಸಿಟ್ಟಿಗೆದ್ದು, ನಾನು ಏನು ಕನ್ನಡ ಸಾಹಿತ್ಯದ ಬಗ್ಗೆ ಮಾತನಾಡಿದ್ದೆ ಅದು ಸರಿ, ಸರಿ ಇಲ್ಲ ಎನ್ನುವಂತಹ ವಾದವಿವಾದ ನಡೆಸುತ್ತಾ ಇದ್ದಾರೆ... ತಮಿಳುನಾಡು, ಕರ್ನಾಟಕ, ಕೇರಳ, ಮಹಾರಾಷ್ಟ್ರದಲ್ಲಿ ಏನು ವಿಚಾರಸರಣಿ ಯುವಕರಲ್ಲಿ ಪ್ರಾರಂಭವಾಗಿದೆ, ಅದು ನನ್ನ ಜೀವನದಲ್ಲಿ ಮಹದಾನಂದವನ್ನು ಉಂಟುಮಾಡಿದೆ.' ಇಲ್ಲಿ ಸೋಲು ಅಪಮಾನ ಹಿಂಜರಿಕೆಗಳನ್ನು ಶಕ್ತಿಯನ್ನಾಗಿ ಪರಿವರ್ತಿಸಿಕೊಳ್ಳುವ ಛಲಗಳಿವೆ. ಈ ಗುಣವು ನಿಂದನೆಯ ಪರಿಭಾಷೆಯಾಗಿದ್ದ ಸಮುದಾಯಗಳ ಹೆಸರುಗಳನ್ನೇ ಕವನ ಸಂಕಲನದ ಶೀರ್ಷಿಕೆಗೆ ಬಳಸಿದ ಸಿದ್ಧಲಿಂಗಯ್ಯನವರಲ್ಲಿ ಪ್ರತಿಫಲಿಸಿತು. 'ದ್ಯಾವನೂರು' ಕಥಾಸಂಕಲನದ ನಾಂದಿ ಮಾತುಗಳಾಗಿರುವ 'ಖಂಡವಿದಕೊ ಮಾಂಸವಿದಕೊ ಗುಂಡಿಗೆಯ ಬಿಸಿರಕ್ತವಿದಕೊ' ಎಂಬಲ್ಲಿ ಇನ್ನೊಂದು ಬಗೆಯಲ್ಲಿ ಬೆಳೆಯಿತು.

## ನಿರಾಶೆಯ ಗಳಿಗೆ

ಚಾರಿತ್ರಿಕ ವಿದ್ಯಮಾನಗಳು ತಮ್ಮೊಳಗಿನ ತಳಮಳಗಳಿಗೆ ತಕ್ಕ ರೂಪುಕೊಡಬಲ್ಲ ನಾಯಕರನ್ನು ತಾವೇ ಸೃಷ್ಟಿಸಿಕೊಳ್ಳುತ್ತವೆಯೊ, ವಿದ್ಯಮಾನಗಳ ಸುಳಿಗೆ ಸಿಕ್ಕ ಸಾಮಾನ್ಯ ವ್ಯಕ್ತಿಗಳೂ ಸಹಜ ನಾಯಕರಾಗಿ ಹೊಮ್ಮುತ್ತಾರೆಯೊ? ಚರಿತ್ರೆಯು ಕೆಲವೊಮ್ಮೆ ನಾಯಕತ್ವ ವಹಿಸಲು ಅವಕಾಶವನ್ನು ವ್ಯಕ್ತಿಗಳಿಗೆ ಕಲ್ಪಿಸುತ್ತದೆ. ಆದರೆ, ಅದಕ್ಕೆ ಬೇಕಾದ ಕಸುವು ಅವರಲ್ಲಿರುವುದಿಲ್ಲ. ಬಿಬಿಯವರು ದೀರ್ಘಕಾಲದ ಜನಾಂದೋಲನದ ಮೂಲಕ ಸಾಮಾಜಿಕ ಪರಿವರ್ತನೆಯ ನಾಯಕತ್ವ ವಹಿಸುವರು ಎಂಬ ನಿರೀಕ್ಷೆ ಇಟ್ಟುಕೊಂಡಿದ್ದ ಕೆಲವು ಚಳವಳಿಗಾರರಿಗೆ ನಿರಾಶೆಯಾಯಿತು. 'ಕಾಂಗ್ರೆಸ್ ರಾಜಕಾರಣದ ಚೌಕಟ್ಟಿನಲ್ಲಿ ಕೆಲಸ ಮಾಡುತ್ತಿರುವ ಬಸವಲಿಂಗಪ್ಪ, ಈ ಪ್ರಕರಣದಲ್ಲಿ ಹೊರಬಂದ ಕ್ರೂರಸತ್ಯಗಳನ್ನು ಹೇಗೆ ಎದುರಿಸುತ್ತಾರೆಂಬ ಬಗ್ಗೆ ಹೇಳುವುದು ಕಷ್ಟ' ಎಂದು ಅನಂತಮೂರ್ತಿ ಊಹಿಸಿದ್ದರು ಕೂಡ. ಬಿಬಿಯವರಿಗೆ ಪಕ್ಷ ರಾಜಕಾರಣದ ಚೌಕಟ್ಟನ್ನು ಮೀರಿ ಬೀದಿ ಚಳವಳಿಗಾರನಾಗಿ ರೂಪಾಂತರಗೊಳ್ಳಲು ಸಾಧ್ಯವಾಗಲಿಲ್ಲ. ಅವರು ಮತ್ತೆ ರಾಜಕೀಯ ಅಧಿಕಾರದತ್ತ ಚಲಿಸಿದರು. ಅವರ ಬಿಕ್ಕಟ್ಟಿನ ಹೊತ್ತಲ್ಲಿ ಜತೆಗೆ ನಿಂತಿದ್ದ ಕೆಲವರು ಇದನ್ನು ಒಪ್ಪಲಿಲ್ಲ. 'ಬಸವಲಿಂಗಪ್ಪನವರು ಮೊದಲಿಂದಲೂ ಅರೆ ಬಂಡವಾಳಶಾಹಿಗಳ ಕೃಪಾಪೋಷಿತರಾಗಿದ್ದು